ದಿನಾಂಕಃ **04-03-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದ,

1) ಸರ್ವೇ ನಂ. 290 ರಲ್ಲಿ ನನ್ನ ತಂದೆ ಮತ್ತು ತಾತನಿಗೆ ಎಷ್ಟು ಆಸ್ತಿ ವಿಸ್ತೀರ್ಣ ಇತ್ತು ಎಂದು ದಾಖಲೆ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 288, 289 ಮತ್ತು 290 ಆಸ್ತಿಗಳಲ್ಲಿ ನನ್ನ ತಾತ ತೀರಿಕೊಂಡ ನಂತರ 1991 ಮತ್ತು 92 ನೇ ಸಾಲಿನಲ್ಲಿ ನನ್ನ ತಾಯಿ ಮತ್ತು ತಂದೆಯ ಮತ್ತು ಸಹೋದರರು ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಯ ಹೆಸರಿನಲ್ಲಿ ಸರ್ವೇ ನಂ. 289 1 ಎಕರೆ 12 ½ ಗುಂಟೆ ಮತ್ತು 290 ರಲ್ಲಿ 2 ಎಕರೆ 5 ಗುಂಟೆ ಪ್ರತ್ಯೇಕವಾಗಿ ಖಾತೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಅದೇರೀತಿ ಕೆಂಪೇಗೌಡ ಹೆಸರಿನಲ್ಲಿ ಸರ್ವೇ ನಂ. 289 ರಲ್ಲಿ 1 ಎಕರೆ 8 ಗುಂಟೆ ಮತ್ತು 288 ರಲ್ಲಿ 2 ಎಕರೆ 10 ಗುಂಟೆ ಖಾತೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದೇರೀತಿ ಮರೀಗೌಡ ಹೆಸರಿನಲ್ಲಿ ಸರ್ವೇ ನಂ. 289 ರಲ್ಲಿ 1 ಎಕರೆ 8 ½ ಗುಂಟೆ ಮತ್ತು 288 ರಲ್ಲಿ 2 ಎಕರೆ 9 ಗುಂಟೆ ಖಾತೆ ನಮೂದು ಇರುತ್ತದೆ ಎಂದರೆ ಸರಿಯಲ್ಲ.

2) ನನ್ನ ತಾಯಿ, ಕೇಂಪೇಗೌಡ ಮತ್ತು ಮರೀಗೌಡ ರ 1991 ನೇ ಸಾಲಿನಲ್ಲಿ ಅದೇರೀತಿ ಕೆಂಪೇಗೌಡ ಹೆಸರಿನಲ್ಲಿ ಸರ್ವೇ ನಂ. 289, 288 ಮತ್ತು 290 ರಲ್ಲಿ ಸಮವಾಗಿ ಆಸ್ತಿಯನ್ನು ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 290 ರಲ್ಲಿ ನಮ್ಮ ಕುಟುಂಬಕ್ಕೆ 2 ಎಕರೆ 5 ಗುಂಟೆ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 290 ಆಸ್ತಿಯ ದಕ್ಷಿಣಕ್ಕೆ ಮೊಟಮ್ಮ ಕುಟುಂಬದವರ ಮತ್ತು ಪ್ರತಿವಾದಿಗಳ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ.

3) ಪ್ರತಿವಾದಿಯ ಮುತ್ತಜ್ಜಿಯಾದ ಪುಟ್ಟಿರಮ್ಮ ರವರಿಗೆ ಸರ್ವೇ ನಂ. 289, ಮತ್ತು 290 ಅಸ್ತಿಯ ಪೂರ್ವ ಭಾಗಕ್ಕೆ ದಿಃ 18-06-1913 ರಂದು 2 ಎಕರೆ ಆಸ್ತಿಯನ್ನು ನೋಂದಾಯಿತ ದಾನ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಪುಟ್ಟಿರಮ್ಮ ರವರಿಗೆ ಸಿದ್ದಮ್ಮ ಎಂಬ ಒಬ್ಬಳೆ ಮಗಳಿರುತ್ತಾರೆ ಎಂದರೆ ಸರಿಯಲ್ಲ. ದಿಃ 03.07.2023 ರಂದು ಮೋಟೆಗೌಡರ ವರು ಕೇವಲ 20 ಗುಂಟೆ ಆಸ್ತಿಯನ್ನು ಖರೀದಿ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೋಟೆಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರಿಂದ 5 ರವರು ಮೋಟೆಗೌಡರ ವಾರಸುದಾರರು ಎಂದರೆ ಸರಿ. ಮೋಟೆಗೌಡರವರ ಮಗ ಕೇಪೇಗೌಡರು ಸರ್ವೇ ನಂ. 290 ರಲ್ಲಿ ಒಟ್ಟು 5 ಎಕರೆ 24 ಗುಂಟೆ ಆಸ್ತಿಯನ್ನು ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ಮರೀಗೌಡರು ಪ್ರಶ್ನಿಸಿದ್ದರು ಎಂದರೆ ಸರಿಯಲ್ಲ. ತದನಂತರ ಮರೀಗೌಡರ ಹೆಸರಿಗೆ ಸರ್ವೇ ನಂ 290 ರಲ್ಲಿ 2 ಎಕರೆ 10 ಗುಂಟೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 289 ಮತ್ತು 290 ಮೊದಲಿಗೇ ಸರ್ವೇ ನಂ. 68 ಮತ್ತು 69 ಆಗಿತ್ತು ಎಂದರೆ ಸರಿಯಲ್ಲ. ಸರ್ವೇ ನಂ. 68 ಮತ್ತು 69 ಹೊಸ ನಂಬರ್ ಗಳಾಗಿ ಸರ್ವೇ ನಂ 289 ಮತ್ತು 290 ಆಗಿರುತ್ತದೆ ಎಂದರೆ ಸರಿಯಲ್ಲ. ನಮಗೆ ಸರ್ವೇ ನಂ. 290 ರಲ್ಲಿ ನನಗೆ 3 ಎಕರೆ 17 ½ ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 299 ಪ್ರತಿವಾದಿ 7 ರಿಂದ 12 ರವರೆಗೆ ಒಟ್ಟು 2 ಎಕರೆ 10 ಗುಂಟೆ ವಿಸ್ತೀರ್ಣ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 12 ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1991–92 ನೇ ಸಾಲಿನಲ್ಲಿ ಆಗಿರುವ ಮುಟ್ಯೇಶನ ವಹಿಯನ್ನು ನಾನು ಪ್ರಶ್ನೇ ಮಾಡಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ